ಹೋಗಿದೆ. ಇನ್ನು ಸ್ವಲ್ಪ ದಿನಗಳಲ್ಲಿ ಅದನ್ನು ಕ್ಯಾಬಿನೆಟ್ ಮುಂದೆ ತಂದು ಈ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಶೀಘ್ರದಲ್ಲಿಯೇ ಮಾಡುತ್ತೇವೆಂದು ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ, ಇವರು ಕೃಷಿ ಸಹಾಯಕರ ಬಗ್ಗೆ ಹೇಳಲಿಲ್ಲ. ಕೃಷಿ ಅಧಿಕಾರಿಗಳ ಬಗ್ಗೆ ಹೇಳಿದರು.

ಶ್ರೀ ಬಂಡೆಪ್ಪ ಕಾಶಂಪೂರ್ : ತಮಗೆ ಗೊತ್ತಿದೆ, ಮುಂದಿನ ದಿನಗಳಲ್ಲಿ.....

ಅಧ್ಯಕ್ಷರು : ಪಾಟೀಲರೇ, ಯಾರು ಪ್ರಶ್ನೆ ಕೇಳಿರುತ್ತಾರೆ ಅವರಿಗೆ ಎರಡು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇದೆ. ದಯಮಾಡಿ ಕೇಳಿ. ಇಲ್ಲದಿದ್ದರೆ ಒಂದು ಗಂಟೆಗೆ ಪ್ರಶ್ನೋತ್ತರವನ್ನು ನಿಲ್ಲಿಸುತ್ತೇನೆ. ನಾನು ಬಹಳ ದಿನ ಈ ರೀತಿ ಮಾಡಲು ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ.

ಅಧ್ಯಕ್ಷರು : ಎಲ್ಲಾ ರಾಜ್ಯದ ಪ್ರಶ್ನೆಗಳೇ. ಈಗ ಅವಕಾಶ ಕೊಡುವುದಕ್ಕಾಗುವುದಿಲ್ಲ. ಬೇರೆ ರೂಪದಲ್ಲಿ ನೋಟಿಸ್ ತೆಗೆದುಕೊಂಡು ಬನ್ನಿ. ನಾನು ಅವಕಾಶ ಮಾಡಿ ಕೊಡುತ್ತೇನೆ. ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಯಬೇಕಾಗಿದೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ತೀರ್ಮಾನ ತೆಗೆದುಕೊಂಡ ಹಾಗೆ ಕೃಷಿ ಸಹಾಯಕರ ಹುದ್ದೆಗಳನ್ನು ಮುಂದಿನ ದಿನಗಳಲ್ಲಿ ಟೆಕ್ನಿಕಲ್ ಪೋಸ್ಟ್‌ಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ. Non-technical ಆಗಿ ಇರಬಾರದು ಎಂದು ಹೇಳಿ ಹಿಂದಿನ ಸರ್ಕಾರ ತೀರ್ಮಾನ ತೆಗೆದುಕೊಂಡಿತ್ತು. ಅದಕ್ಕೋಸ್ಕರ ಕೃಷಿ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ, ಈ ರೈತ ಸಂಪರ್ಕ ಕೇಂದ್ರಗಳಲ್ಲಿ ನಿಜವಾಗಿಯೂ ಆಧುನೀಕರಣವಾಗಬೇಕು. ರೈತ ಸಂಪರ್ಕ ಕೇಂದ್ರಗಳಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಆಗುತ್ತಿಲ್ಲ. ನಾನು ಹೇಳಿದ ಹಾಗೆ ಬರೀ ಗೊಬ್ಬರ ಮಾರುವುದು, ಬೀಜ ಮಾರುವುದು ಇಷ್ಟೇ ಆಗುತ್ತಿದೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಸ್ವಲ್ಪ ದಿನಗಳಲ್ಲಿ ಸುಮಾರು ಛೇಂಜಸ್ ತರುತ್ತಿದ್ದೇವೆ. ನಮ್ಮ ಯೂನಿವರ್ಸಿಟಿಗಳಿಗೆ ಹೇಳಿ ಸೈಂಟಿಸ್ಟ್‌ಗಳನ್ನು ಉಸ್ತುವಾರಿಗೆ ಹಾಕಬೇಕೆಂದು ನಾವು ಯೋಜನೆ ರೂಪಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ರೈತ ಸಂಪರ್ಕ ಕೇಂದ್ರಗಳು ನಡೆಯುತ್ತಿವೆ ಎಂಬ ಭರವಸೆಯನ್ನು ನಾವು ತಮಗೆ ಕೊಡುತ್ತೇನೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯಲ್ಲಿನ ಮೀನುಗಾರಿಕೆಯಲ್ಲಿ ಆದಾಯ.

181 (541) ಶ್ರೀ ನಾಗರಾಜು ಎಂ.ಟಿ.ಬಿ. (ಹೊಸಕೋಟೆ) : ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯ ವಿಸ್ತೀರ್ಣವೆಷ್ಟು;

ಆ) ಈ ಕೆರೆಯಲ್ಲಿ ಯಾವ ವರ್ಷದಿಂದ ಮೀನುಗಾರಿಕೆ ಕೃಷಿಯನ್ನು ಕೈಗೊಳ್ಳಲಾಗುತ್ತಿದೆ;

ಇ) ಮೀನುಗಾರಿಕೆ ಕೃಷಿ ಕೈಗೊಳ್ಳುತ್ತಿದ್ದಲ್ಲಿ, ಕೆರೆಯಲ್ಲಿ ಉತ್ಪತ್ತಿಯಾಗುತ್ತಿರುವ ಮೀನನ್ನು ಯಾವ ರೀತಿ ವಿಲೇವಾರಿ ಮಾಡಲಾಗುತ್ತಿದೆ;

ಈ) ಇದರಿಂದ ಕಳೆದ ಮೂರು ವರ್ಷಗಳಿಂದ ಬಂದಿರುವ ಆದಾಯವೆಷ್ಟು;

ಉ) ಈ ಆದಾಯವನ್ನು ವಾರ್ಷಿಕವಾಗಿ ಪಡೆಯಲಾಗುತ್ತಿದೆಯೇ ಅಥವಾ ನಿಗದಿಪಡಿಸಿ ಹರಾಜಿನಿಂದ ಪಡೆಯಲಾಗುತ್ತಿದೆಯೇ;

ಊ) ಹಾಗಿದ್ದಲ್ಲಿ, 2006–07ನೇ ಸಾಲಿಗೆ ಹರಾಜಿನಲ್ಲಿ ಬಂದ ಮೊತ್ತವೆಷ್ಟು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) :

ಅ) ಎಲೆ ಮಲ್ಲಪ್ಪ ಶೆಟ್ಟಿ ಕೆರೆಯ ಜಲ ವಿಸ್ತೀರ್ಣವು 134.00 ಹೆಕ್ಟೇರ್‌ಗಳಾಗಿರುತ್ತದೆ.

ಆ) ಮೀನುಗಾರಿಕೆ ಇಲಾಖೆ ಪ್ರಾರಂಭವಾದಗಿನಿಂದಲೂ (1957ನೇ ಇಸವಿಯಿಂದ) ಮೀನುಗಾರಿಕೆ ಇಲಾಖೆಯ ಮುಖಾಂತರ ಈ ಕೆರೆಯಲ್ಲಿ ಮೀನು ಕೃಷಿಯನ್ನು ಕೈಗೊಳ್ಳಲಾಗುತ್ತಿದೆ.

ಇ) ಸದರಿ ಕೆರೆಯಲ್ಲಿ ಉತ್ಪತ್ತಿಯಾಗುತ್ತಿರುವ ಮೀನನ್ನು ಗುತ್ತಿಗೆದಾರರಿಂದ ಸ್ಥಳೀಯವಾಗಿ ಚಿಲ್ಲರೆ ಮಾರಾಟ ಮಾಡಿ ಉಳಿದ ಮೀನನ್ನು ಸಗಟು ಮಾರಾಟ ಮಾಡಲಾಗುತ್ತಿದೆ.

ಈ) ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಈ ಕೆರೆಯ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಪೈಪೋಟಿ ನಡೆಸಿದ 3 ಸಹಕಾರ ಸಂಘಗಳ ನಡುವೆ ಹರಾಜು ಮೂಲಕ ವಿಲೇವಾರಿ ಮಾಡಿದ್ದು, ಗರಿಷ್ಟ ಮೊತ್ತ ಸೂಚಿಸಿ ಗುತ್ತಿಗೆಗೆ ಪಡೆದ ಗುತ್ತಿಗೆದಾರರಿಂದ ಸರ್ಕಾರಕ್ಕೆ ಕೆಳಕಂಡಂತೆ ಆದಾಯವು (ಗುತ್ತಿಗೆ ಮೊತ್ತವು) ಬಂದಿರುತ್ತದೆ.

ವರ್ಷ	ಮೊತ್ತ
2001–02	ರೂ. 12,00,750–00
2002–03	ರೂ. 13,20,825–00
2003–04	ರಾಜ್ಯದಲ್ಲಿನ ಸತತ ಬರಗಾಲದ ಪ್ರಯುಕ್ತ ಸರ್ಕಾರದ ಆದೇಶದಂತೆ 2002–03ನೇ ಸಾಲಿಗೆ ಪಾವತಿಸಲಾಗಿದ್ದ ಗುತ್ತಿಗೆ ಮೊತ್ತವನ್ನು 2003–04ನೇ ಸಾಲಿಗೆ ಹೊಂದಾಣಿಕೆ ಮಾಡಿಕೊಂಡು ಗುತ್ತಿಗೆ ಅವಧಿಯನ್ನು ಒಂದು ವರ್ಷಕ್ಕೆ ವಿಸ್ತರಿಸಲಾಗಿದೆ.
2004–05	ರೂ. 14,52,908–00
2005–06	ರೂ. 15,98,198–00*

* ರಾಜ್ಯದಲ್ಲಿನ ಬಡ ಒಳನಾಡು ಮೀನುಗಾರರು ಹಲವು ವರ್ಷಗಳಿಂದ ಸತತ ಬರಗಾಲದ ಪ್ರಯುಕ್ತ ನಷ್ಟವನ್ನು ಅನುಭವಿಸಿದ್ದು, ಅವರು ಆರ್ಥಿಕವಾಗಿ ಚೇತರಿಸಿಕೊಳ್ಳಲು ಅನುಕೂಲ

ಮಾಡಿಕೊಡುವ ದೃಷ್ಟಿಯಿಂದ ಮೂರು ವರ್ಷಗಳ ಅವಧಿಗೆ ಗುತ್ತಿಗೆ ಪಡೆದ ಗುತ್ತಿಗೆದಾರರ ಗುತ್ತಿಗೆ ಅವಧಿಯನ್ನು ಮತ್ತೆರಡು ವರ್ಷಗಳ ಅವಧಿಗೆ ಅಂದರೆ 4ನೇ ಮತ್ತು 5ನೇ ವರ್ಷಕ್ಕೆ ವಿಸ್ತರಿಸಿ ಸರ್ಕಾರವು ಆದೇಶ ಹೊರಡಿಸಿದೆ. ಸದರಿ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ಗುತ್ತಿಗೆದಾರರ ಕೋರಿಕೆಯ ಮೇರೆಗೆ 4ನೇ ವರ್ಷಕ್ಕೆ ಗುತ್ತಿಗೆ ಅವಧಿಯನ್ನು ವಿಸ್ತರಿಸಲಾಗಿದೆ.

ಊ) ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಲಾಗಿರುವ ನಿಯಮಗಳ ಮೇರೆಗೆ ಗುತ್ತಿಗೆ ಮೊತ್ತವನ್ನು ವಾರ್ಷಿಕವಾಗಿ ಪಡೆಯಲಾಗುತ್ತಿದೆ. ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಅರ್ಹ ಮೀನುಗಾರರ ಸಹಕಾರ ಸಂಘಗಳಿಂದ ಅರ್ಜಿಗಳು ಇಲಾಖೆಗೆ ಬಾರದಿದ್ದ ಸಂದರ್ಭಗಳಲ್ಲಿ, ಅಂತಹ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್/ಹರಾಜು ಮುಖಾಂತರ ವಿಲೇವಾರಿ ಮಾಡಲಾಗುತ್ತದೆ. ಅದರಂತೆಯೆ ಈ ಕೆರೆಯ ಗುತ್ತಿಗೆ ಮೊತ್ತವನ್ನು ವಾರ್ಷಿಕವಾಗಿ ವಸೂಲಿ ಮಾಡಲಾಗಿದೆ.

ಊ) ರಾಜ್ಯದಲ್ಲಿನ ಬಡ ಮತ್ತು ದುರ್ಬಲ ವರ್ಗಕ್ಕೆ ಸೇರಿದ ಒಳನಾಡು ಮೀನುಗಾರರ ಜೀವನ ನಿರ್ವಹಣೆಗಾಗಿ ಸ್ವಂತ ಉದ್ಯೋಗಾವಕಾಶವನ್ನು ಅವರಿಗೆ ಕಲ್ಪಿಸಿಕೊಡಬೇಕೆಂಬ ಸದುದ್ದೇಶದಿಂದ ಮತ್ತು ಮೀನುಗಾರಿಕೆಯಿಂದ ಹೆಚ್ಚಿನ ಆದಾಯವನ್ನು ನಿರೀಕ್ಷಿಸದೆ ಸರ್ಕಾರವು ಹಮ್ಮಿಕೊಂಡಿರುವ ಸಮಾಜ ಕಲ್ಯಾಣ ಕಾರ್ಯಕ್ರಮದಡಿ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನಾಮಿನಲ್ ಗುತ್ತಿಗೆ ದರಕ್ಕೆ ವಿಲೇವಾರಿ ಮಾಡಲು ಸಂಬಂಧಪಟ್ಟ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನೀರಾವರಿ ಇಲಾಖೆ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ರೂಪಿಸಲಾಗಿರುವ ಹೊಸ ಗುತ್ತಿಗೆ ನೀತಿಯನ್ವಯ ಹೊರಡಿಸಲಾದ ಸಂಬಂಧಪಟ್ಟ ನಿಯಮಗಳ ಮೇರೆಗೆ ಮೀನುಗಾರರ ಸಹಕಾರ ಸಂಘಗಳಿಗೆ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು 5 ವರ್ಷಗಳ ಅವಧಿಗೆ ಪ್ರತಿವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇ. 5ರಷ್ಟು ಗುತ್ತಿಗೆ ಮೊತ್ತವನ್ನು ಹೆಚ್ಚಿಸಿ ಗುತ್ತಿಗೆಗೆ ನೀಡಲು ಮತ್ತು ಆಯಾ ಜಲಸಂಪನ್ಮೂಲದ ಒಟ್ಟು ಜಲ ವಿಸ್ತೀರ್ಣದ ಶೇ. 50ರಷ್ಟನ್ನು ಮೀನುಗಾರಿಕೆ ವರ್ಷದಲ್ಲಿ ಮೀನು ಕೃಷಿಗಾಗಿ ಲಭ್ಯವಾಗುವ ವಾರ್ಷಿಕ ಸರಾಸರಿ ಜಲ ವಿಸ್ತೀರ್ಣವನ್ನು ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶವೆಂದು ಪರಿಗಣಿಸಿ ಪ್ರತಿ ಹೆಕ್ಟೇರ್‌ಗೆ ರೂ. 150–00ರಂತೆ ಗುತ್ತಿಗೆ ಮೊತ್ತವನ್ನು ನಿಗದಿಪಡಿಸಿ ಗುತ್ತಿಗೆಗೆ ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ. ಸದರಿ ನಿಯಮಗಳಡಿ ಆಯಾ ಜಲಸಂಪನ್ಮೂಲದ ವ್ಯಾಪ್ತಿಯಲ್ಲಿನ ಸ್ಥಳೀಯ ಮೀನುಗಾರರ ಸಹಕಾರ ಸಂಘಕ್ಕೆ ಅವರ ಕೋರಿಕೆಯ ಮೇರೆಗೆ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡಲು ಪ್ರಥಮ ಆದ್ಯತೆಯನ್ನು ನೀಡಲಾಗಿದೆ. ಒಂದು ವೇಳೆ ಸ್ಥಳೀಯ ಮೀನುಗಾರರ ಸಹಕಾರ ಸಂಘವು ಅರ್ಜಿಯನ್ನು ಸಲ್ಲಿಸದಿದ್ದ ಪಕ್ಷದಲ್ಲಿ 2ನೇ ಆದ್ಯತೆಯನ್ನು ಹೋಬಳಿ ಮಟ್ಟದ ಮೀನುಗಾರರ ಸಹಕಾರ ಸಂಘಕ್ಕೆ 3ನೇ ಆದ್ಯತೆಯನ್ನು ತಾಲ್ಲೂಕು ಮಟ್ಟದ ಮೀನುಗಾರರ ಸಹಕಾರ ಸಂಘಕ್ಕೆ ಹಾಗೂ ಅದೇ

ರೀತಿ 4ನೇ ಆದ್ಯತೆಯನ್ನು ಜಿಲ್ಲಾ ಮಟ್ಟದ ಮೀನುಗಾರರ ಸಹಕಾರ ಸಂಘಕ್ಕೆ ನೀಡಲಾಗಿದೆ. ಒಂದೇ ಜಲಸಂಪನ್ಮೂಲಕ್ಕಾಗಿ ಮೀನುಗಾರರ ಸಹಕಾರ ಸಂಘಗಳ ನಡುವೆ ಅನಗತ್ಯ ಪೈಪೋಟಿ ಉಂಟಾಗಬಾರದೆಂಬ ಹಾಗೂ ಜಲಸಂಪನ್ಮೂಲವಿರುವ ಸ್ಥಳದಲ್ಲಿ ವಾಸಿಸುವ/ಕಾರ್ಯನಿರ್ವಹಿಸುವ ಸ್ಥಳೀಯ ಮೀನುಗಾರರಿಗೆ/ಮೀನುಗಾರರ ಸಹಕಾರ ಸಂಘಕ್ಕೆ ನ್ಯಾಯ ದೊರಕಿಸಿಕೊಡುವ ದೃಷ್ಟಿಯಿಂದ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಹಲವು ರಿಟ್ ಅರ್ಜಿಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ಆದೇಶಗಳನ್ನು ಗಣನೆಗೆ ತೆಗೆದುಕೊಂಡು ಮೀನುಗಾರರ ಸಹಕಾರ ಸಂಘಗಳ ನಡುವೆ ಉಂಟಾಗಬಹುದಾದ ಅನಗತ್ಯ ಪೈಪೋಟಿಯನ್ನು ತಪ್ಪಿಸುವ ಉದ್ದೇಶದಿಂದ ಮೇಲಿನಂತೆ ಆದ್ಯತೆಯನ್ನು ನಿಗದಿಪಡಿಸಲಾಗಿದೆ. ಸರ್ಕಾರಿ ಸ್ವಾಮ್ಯದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಕೋರಿ ಸಂಬಂಧಪಟ್ಟ ಯಾವುದೇ ಅರ್ಹ ಮೀನುಗಾರರ ಸಹಕಾರ ಸಂಘದಿಂದ ಅರ್ಜಿಯು ಇಲಾಖೆಗೆ ಬಾರದಿದ್ದಲ್ಲಿ, ಅಂತಹ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಟೆಂಡರ್–ಕಂ–ಹರಾಜು ಮುಖಾಂತರ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಅದರಂತೆಯೆ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯ ಮೀನು ಪಾಶುವಾರು ಹಕ್ಕನ್ನು ಸದರಿ ನಿಮಯಗಳ ಮೇರೆಗೆ ಸ್ಥಳೀಯ ಅರ್ಹ ಮೀನುಗಾರರ ಸಹಕಾರ ಸಂಘವಾದ ರಾಂಪುರ ಮೀನುಗಾರರ ಸಹಕಾರ ಸಂಘಕ್ಕೆ 2006–07ನೇ ಸಾಲಿನಿಂದ 5 ವರ್ಷಗಳ ಅವಧಿಗೆ ಸರ್ಕಾರದ ಹೊಸ ಗುತ್ತಿಗೆ ನೀತಿಯನ್ವಯ ಅವರ ಕೋರಿಕೆಯ ಮೇರೆಗೆ ಗುತ್ತಿಗೆಗೆ ನೀಡಲಾಗಿದೆ.

ಶ್ರೀ ಎಂ.ಟಿ.ಬಿ. ನಾಗರಾಜು : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಬೆಂಗಳೂರು ನಗರ ಎಲೆ ಮಲ್ಲಪ್ಪ ಶೆಟ್ಟಿ ಕೆರೆ ವಿಸ್ತೀರ್ಣ ಸುಮಾರು 134 ಹೆಕ್ಟೇರ್ ಇದೆ. ಈ ಕೆರೆಯಲ್ಲಿ ಯಾವ ವರ್ಷದಲ್ಲಿ ಮೀನುಗಾರಿಕೆ ಕೃಷಿ ಕೈಗೊಳ್ಳಲಾಗುತ್ತಿದೆ ಎಂಬ ಪ್ರಶ್ನೆಗೆ ಮೀನುಗಾರಿಕೆ ಇಲಾಖೆಯ ಪ್ರಾರಂಭದಿಂದಲೂ 1957ನೇ ಇಸವಿಯಿಂದ ಮೀನುಗಾರಿಕೆ ಇಲಾಖೆಯ ಮುಖಾಂತರ ಈ ಕೆರೆಯಲ್ಲಿ ಮೀನು ಕೃಷಿಯನ್ನು ಕೈಗೊಳ್ಳಲಾಗುತ್ತಿದೆ. ಸದರಿ ಕೆರೆಯಲ್ಲಿ ಉತ್ಪತ್ತಿಯಾಗುತ್ತಿರುವ ಮೀನನ್ನು ಸ್ಥಳೀಯ ಗುತ್ತಿಗೆದಾರರಿಂದ ಚಿಲ್ಲರೆ ಮಾರಾಟ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. 2000–01ನೇ ಸಾಲಿನಲ್ಲಿ ಈ ಮೀನು ಸಹಕಾರ ಸಂಘದವರು ಟೆಂಡರ್ ಮಾಡುವಂತಹ ಸಂದರ್ಭದಲ್ಲಿ ಅವರವರಲ್ಲಿಯೇ ಗಲಾಟೆ ಉದ್ಭವವಾಯಿತು. ಆ ಸಂದರ್ಭದಲ್ಲಿ ಮೂರು ಸಂಘಗಳವರೂ ಸೇರಿ, ಉಚ್ಚ ನ್ಯಾಯಾಲಯಕ್ಕೆ ಹೋದಾಗ ಆ ಸಂದರ್ಭದಲ್ಲಿ ಕೋರ್ಟ್ ಒಂದು ಆದೇಶ ನೀಡಿತು. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ, ಈ ಕೆರೆಯ ನೀರು ಪಾಶುವಾರು ಹಕ್ಕನ್ನು ಗುತ್ತಿಗೆ ಪಡೆಯಲು ಪೈಪೋಟಿ ನಡೆಸಿದ ಮೂರು ಸಹಕಾರ ಸಂಘಗಳ ನಡುವೆ ಹರಾಜು ಮೂಲಕ ವಿಲೇವಾರಿ ಮಾಡಿದ್ದು, ಗರಿಷ್ಟ ಮೊತ್ತು ಸೂಚಿಸಿ ಗುತ್ತಿಗೆಗೆ ಪಡೆದು ಗುತ್ತಿಗೆದಾರರಿಂದ ಕೆಳಕಂಡಂತೆ ಆದಾಯವು ಸರ್ಕಾರಕ್ಕೆ ಗುತ್ತಿಗೆ ಮೊತ್ತವಾಗಿ ಬಂದಿರುತ್ತದೆ. 2001–02ನೇ ವರ್ಷದಲ್ಲಿ ರೂ. 12 ಲಕ್ಷ 750 ರೂಪಾಯಿ, 2002–03ನೇ ಇಸವಿಯಲ್ಲಿ 13,20,000 ಮತ್ತು ಮೂರನೇ ವರ್ಷದಲ್ಲಿ ಪ್ರತಿ

ವರ್ಷ 10,000 ರೂಪಾಯಿ ಎನ್‌ಹ್ಯಾನ್ಸ್ ಮಾಡಿ ಮೂರು ವರ್ಷಕ್ಕೆ ಉಚ್ಚ ನ್ಯಾಯಾಲಯದ ಆದೇಶದಂತೆ ಸರ್ಕಾರದವರು ಒಂದು ಆದೇಶವನ್ನು ಕೊಟ್ಟಿದ್ದಾರೆ. ಆ ವರ್ಷದಲ್ಲಿ ಬರೀ ಒಂದು ವರ್ಷ 12 ಲಕ್ಷ 750 ರೂಪಾಯಿ ಪಾವತಿ ಮಾಡಿದ್ದಾರೆ. ಎರಡನೇ ವರ್ಷದಲ್ಲಿ 13 ಲಕ್ಷ 20,000 ರೂಪಾಯಿ ಪಾವತಿ ಮಾಡಿದ್ದಾರೆ. ಮೂರನೇ ವರ್ಷದಲ್ಲಿ 14 ಲಕ್ಷ ರೂಪಾಯಿ ಕಟ್ಟಬೇಕಾಗಿತ್ತು. ಆಗ ಸರ್ಕಾರಕ್ಕೆ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. "ಮಳೆ ಬಂದಿಲ್ಲ, ಬರಗಾಲ ಇದೆ, ಕೆರೆ ತುಂಬಿಲ್ಲ" ಎಂಬ ನೆಪದಿಂದ ಒಂದು ವರ್ಷದ ಹಣವನ್ನು ಸರ್ಕಾರಕ್ಕೆ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಷಾಮೀಲಾಗಿ 14 ಲಕ್ಷ ರೂಪಾಯಿಗಳ ಹಣ ಸರ್ಕಾರಕ್ಕೆ ಪಾವತಿಯಾಗಿಲ್ಲ. ಹಿರೇಮಲ್ಲಪ್ಪ ಕೆರೆಯಲ್ಲಿ 360 ದಿವಸಗಳೂ ನೀರು ಸ್ಟೋರ್ ಆಗುತ್ತದೆ. ಹೆಚ್ಚುವರಿ ನೀರು ಅಲ್ಲಿಂದ ಹೊರ ರಾಜ್ಯಕ್ಕೆ ಹರಿದುಹೋಗುತ್ತದೆ. ಆ ವರ್ಷದಲ್ಲಿ 15 ಲಕ್ಷ ಸರ್ಕಾರದ ಬೊಕ್ಕಸಕ್ಕೆ ಲಾಸ್ ಆಗಿದೆ. 2005–06ರಲ್ಲಿ ಅದು ಆಗಸ್ಟ್ ತಿಂಗಳಲ್ಲಿ ಟೆಂಡರ್ ಆಗಬೇಕು. ಆದರೆ ಮೇ ತಿಂಗಳಿನಲ್ಲಿಯೇ ಆ ಟೆಂಡರ್‌ನ್ನು ಮುಗಿಸಿದ್ದಾರೆ. ಯಾರಿಗೆ ಟೆಂಡರ್ ಕೊಟ್ಟಿದ್ದಾರೆಂದರೆ ಹಾಗೂ ಎಷ್ಟಕ್ಕೆ ಕೊಟ್ಟಿದ್ದಾರೆಂದರೆ ಪ್ರತಿ ವರ್ಷಕ್ಕೆ 10 ಸಾವಿರ ರೂಪಾಯಿಗಳಂತೆ 5 ವರ್ಷಕ್ಕೆ ಅದೂ ಹತ್ತು ಪರ್ಸೆಂಟ್‌ಗೆ ಎನ್‌ಹ್ಯಾನ್ಸ್ ಮಾಡಿ 5 ನಿಮಿಷಕ್ಕೆ 84 ಸಾವಿರ ರೂಪಾಯಿಗಳಿಗೆ ಟೆಂಡರ್ ಆಗಿ ಗುತ್ತಿಗೆಯನ್ನು ಈಗಾಗಲೇ ಕೊಟ್ಟಿದ್ದಾರೆ. ಇದರಲ್ಲಿ ಹೆಚ್ಚಿನ ರೀತಿಯಲ್ಲಿ ಅಕ್ರಮ ಆಗಿದೆ. ಇದು ಗಂಭೀರವಾದ ವಿಷಯ. ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ.

ಅಧ್ಯಕ್ಷರು : ನಾಗರಾಜುರವರೆ ಈ ರೀತಿ ಭಾಷಣ ಮಾಡುವುದಕ್ಕೆ ನಿಂತರೆ ಹೇಗೆ? ಉಪ ಪ್ರಶ್ನೆ ಮಾತ್ರ ಕೇಳಿ. ಉಪ ಪ್ರಶ್ನೆ ಮಾತ್ರ ಕೇಳದೆ ಈ ರೀತಿ ಭಾಷಣ ಮಾಡುತ್ತಾ ನಿಂತರೆ ಹೇಗೆ?

ಶ್ರೀ ಎಂ.ಟಿ.ಬಿ. ನಾಗರಾಜು : ಇದರ ಟೆಂಡರ್ ಪ್ರಕ್ರಿಯೆ ಆಗಸ್ಟ್ ತಿಂಗಳಿನಲ್ಲಿ ಆಗಬೇಕು. 90 ಲಕ್ಷ ರೂಪಾಯಿಗಳಿಗೆ ಇದು ನಿಜವಾಗಿ ಗುತ್ತಿಗೆಯಾಗಬೇಕು. ಆದರೆ ಮೇ ತಿಂಗಳಲ್ಲಿಯೆ ಮಾಡಿ 5 ವರ್ಷಕ್ಕೆ 84 ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಯಾವ ರೀತಿಯಲ್ಲಿ ಹೀಗೆ ಕೊಟ್ಟಿದ್ದಾರೆ? ಇದನ್ನು ಪರಿಶೀಲನೆ ಮಾಡಬೇಕು. ಈ ರೀತಿದ ಕೊಟ್ಟಂಥ ಅಧಿಕಾರಿ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ರಾಮಪುರ ಸಹಕಾರ ಸಂಘಕ್ಕೆ ಕೊಟ್ಟಿರುವಂಥ ಈ ಪ್ರಕ್ರಿಯೆಯನ್ನೇ ರದ್ದು ಮಾಡಬೇಕು. ಇದರಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಆಗಿದೆ.

ಶ್ರೀ ಬಿ. ನಾಗರಾಜಶೆಟ್ಟಿ (ಮೀನುಗಾರಿಕೆ ಹಾಗೂ ಮುಜರಾಯಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಹಿರಿಯ ಸದಸ್ಯರು ಬಹಳ ಮುಖ್ಯವಾದ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಹೇಳುವುದಾದರೆ ಸರ್ಕಾರದ ಆದೇಶದ ಮೇರೆಗೆ ಸಹಕಾರಿ ಸಂಘಗಳಿಗೆ ಈ ಕೆರೆಯನ್ನು ನಾವು ಕೊಟ್ಟಿದ್ದೇವೆ. ಹಿಂದಿನ ವರ್ಷಗಳಲ್ಲಿ ಅನೇಕ ವಂಚನೆ ಆಗಿದೆಯೆಂದು ಹೇಳಿದ್ದಾರೆ. ಸುಮಾರು 2003–04ರಲ್ಲಿ ಬರಗಾಲ ಎಂದು ಘೋಷಿಸಲಾಗಿತ್ತು.

ಆ ವರ್ಷ ಹಣವನ್ನು ಕಲಿಕ್ಟ್ ಮಾಡಲಿಲ್ಲ. ಆದಕಾರಣ ಇಲ್ಲೇನಾದರೂ ಹೆಚ್ಚು ಕಡಿಮೆ ಆಗಿದ್ದರೆ ಅಥವಾ ಏನಾದರೂ ಕಾನೂನು ಉಲ್ಲಂಘನೆ ಆಗಿದ್ದಲ್ಲಿ ಸೂಕ್ತ ಕ್ರಮವನ್ನು ನಾನು ಕೈಗೊಳ್ಳುತ್ತೇನೆ.

ಶ್ರೀ ಎಂ.ಟಿ.ಬಿ. ನಾಗರಾಜು : ಕಳೆದ 2001–03ರ ಅವಧಿಯಲ್ಲಿ ಮೂರು ವರ್ಷಕ್ಕೆ 48 ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದಾರೆ. 2005–06ರಲ್ಲಿ ಕೇವಲ 10 ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಸರ್ಕಾರಕ್ಕೆ 5 ವರ್ಷದಲ್ಲಿ 80 ಲಕ್ಷ ರೂಪಾಯಿಗಳ ನಷ್ಟವಾಗುತ್ತಿದೆ. ಈ ನಷ್ಟವನ್ನು ಯಾರು ಭರಿಸುವರು? ಈ ಪ್ರಕ್ರಿಯೆಯನ್ನು ರದ್ದು ಮಾಡಬೇಕು ಮತ್ತು ಪ್ರಸ್ತಾವನೆಯನ್ನು ಮರು ಪರಿಶೀಲನೆಯನ್ನು ಮಾಡಬೇಕು ಮತ್ತೆ ಇದನ್ನು ಹರಾಜು ಮಾಡಬೇಕು.

ಶ್ರೀ ಬಿ. ನಾಗರಾಜಶೆಟ್ಟಿ : ರಾಜ್ಯ ಅಧ್ಯಕ್ಷರೆ, ಸರ್ಕಾರದ ಕಾನೂನಿನ ಪ್ರಯುಕ್ತ ನಾವು ಸಹಕಾರ ಸಂಘಗಳಿಗೆ ಕೊಟ್ಟಿದ್ದೇವೆ. ಇದರಲ್ಲೇನಾದರೂ ಕಾನೂನು ಉಲ್ಲಂಘನೆ ಆಗಿದ್ದರೆ ಸೂಕ್ತ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಸಿದ್ದು ಸವದಿಯವರು.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನೀವು ಈ ರೀತಿ ಮಾಡಿದರೆ ಹೇಗೆ? ಮಾನ್ಯ ಸದಸ್ಯರು ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ.

ಅಧ್ಯಕ್ಷರು : ನೀವು ಈ ರೀತಿ ಮಾಡಿದರೆ ನನಗೆ ಸದನ ನಡೆಸಲು ತೊಂದರೆಯಾಗುತ್ತದೆ. ನೀವು ಹೀಗೆಯೇ ನಡೆಸಿ ಎಂದು ಹೇಳಿಬಿಡಿ. ಇದೆಲ್ಲಾ ಸರಿಯಿಲ್ಲ.

ಶ್ರೀ ಎನ್. ಧರ್ಮಸಿಂಗ್ : ಹೀಗಾದರೆ ಏನು ಮಾಡುತ್ತೀರಿ?

ಅಧ್ಯಕ್ಷರು : ಹೌದು ಸ್ವಾಮಿ, ಒಂದು ಗಂಟೆಯೊಳಗೆ ನಾನು ಪ್ರಶ್ನೋತ್ತರವನ್ನು ಮುಗಿಸಬೇಕು.

ಶ್ರೀ ಎನ್. ಧರ್ಮಸಿಂಗ್ : ಹಾಗಾದರೆ ನೀವು ಐದೇ ಪ್ರಶ್ನೆಗಳನ್ನು ಇಡಿ.

ಅಧ್ಯಕ್ಷರು : ಈ ರೀತಿ ತಾವು ಹೇಳಿದರೆ ಹೇಗೆ?

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳುತ್ತಿದ್ದಾರೆಂದರೆ, 80 ಲಕ್ಷಕ್ಕೆ ಹರಾಜಾಗಿದ್ದು ಹತ್ತು ಸಾವಿರಕ್ಕೆ ಪ್ರತಿ ವರ್ಷಕ್ಕೆ ಕೊಡುತ್ತೀರೆಂದರೆ ಇದರ ಪರಿಶೀಲನೆ ಅಲ್ಲ, ಏನೂ ಮಾಡಬೇಕಾಗಿಲ್ಲ. ಗುತ್ತಿಗೆ ಕೊಟ್ಟಿರುವುದನ್ನೇ ರದ್ದುಪಡಿಸಬೇಕು. ಏಕೆಂದರೆ ಕಾನೂನು ಪ್ರಕಾರ ನೀವು ಹೇಗೆ ಈ ರೀತಿ ಕೊಡುತ್ತೀರಿ? ಮೊದಲು ಹೇಗೆ ಕೊಟ್ಟಿರಿ, ಈಗ ಹೇಗೆ ಕೊಟ್ಟಿರಿ, ಅದಕ್ಕೋಸ್ಕರವೇ ಮಾನ್ಯ ಸದಸ್ಯರು ಸ್ಪೆಸಿಫಿಕಲಿ ಕೇಳುತ್ತಿದ್ದಾರೆ, ಆದ್ದರಿಂದ ಮಾನ್ಯ ಮಂತ್ರಿಗಳು ಸರಿಯಾಗಿ ಉತ್ತರವನ್ನು ಕೊಡಲೇಬೇಕು. ಆಗ ತಾವು ಅವರ ರಕ್ಷಣೆಗೆ ಬರಬೇಕು. ಅದನ್ನು ಬಿಟ್ಟು ಉತ್ತರವನ್ನು ಹೇಗೆ ತಡೆಯುತ್ತೀರಿ?

ಅಧ್ಯಕ್ಷರು : ನಾನು ಉತ್ತರ ಕೊಡುವುದನ್ನೇನೂ ತಡೆಯುತ್ತಿಲ್ಲ. ಅವರನ್ನು ಉತ್ತರ ಕೊಡಬೇಡಿ ಎಂದು ನಾನು ಅವರು ಹೇಳುವ ಉತ್ತರವನ್ನು ತಡೆಯುತ್ತಿಲ್ಲ. ಎರಡು ಉಪ ಪ್ರಶ್ನೆ ಮಾತ್ರ ಕೇಳಿ ಎಂದೆ.

ಶ್ರೀ ಎನ್. ಧರ್ಮಸಿಂಗ್ : ಜಮಖಂಡಿ ಶಾಸಕರ ಪ್ರಶ್ನೆ ತೆಗೆದುಕೊಂಡಿರಲ್ಲಾ, ಅದಕ್ಕೆ ನಾನು ಹೇಳಿದೆ.

ಅಧ್ಯಕ್ಷರು : ಏನು ಹೇಳಿದಿರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಏನು ಹೇಳಿದರೆಂದರೆ ತಾವು ಹೊಸಕೋಟೆಯಿಂದ ತರಾತುರಿಯಲ್ಲಿ ಜಮಖಂಡಿಗೆ ಹೋದಿರಲ್ಲಾ, ಅದಕ್ಕೇ ಅವರು ಹೇಳಿದ್ದು.

ಅಧ್ಯಕ್ಷರು : ಆಯಿತು. ಈಗ ನಾನು ಎರಡು ಉಪ ಪ್ರಶ್ನೆಗಳಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಮಾನ್ಯ ಸಚಿವರೆ, ಉತ್ತರ ಹೇಳಿ. ಮಾನ್ಯ ಸದಸ್ಯರು ಏನು ಹೇಳಿದ್ದಾರೆಂದರೆ, ಈ ನಿಯಮಗಳು ಏಕೆ ಇವೆ? ಕಳ್ಳರು ಆ ನಿಯಮಗಳ ಕೆಳಗಡೆ ರಕ್ಷಣೆ ತೆಗೆದುಕೊಳ್ಳುವುದಕ್ಕೆ ಇವೆಯೇ? ಯಾವ ಅಧಿಕಾರಿಗಳು ನಿಮಗೆ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಕೊಡುವುದಿಲ್ಲವೋ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಈ ರೀತಿ ಆದರೆ ಏನು ಪ್ರಯೋಜನವಾಗುತ್ತದೆ. ಸರಿಯಾಗಿ ಉತ್ತರ ಹೇಳಿ.

ಶ್ರೀ ಬಿ. ನಾಗರಾಜಶೆಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಅವರು 80 ಲಕ್ಷ ಎಂದು ಏನು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾದ ವಿಚಾರವಾಗಿದೆ. ಇದು ಒಂದು. ಇನ್ನು ಎರಡನೆಯದಾಗಿ, ಇದು ಹಿಂದೆ ಆ್ಯಕ್ಷನ್ ಆಗಿಹೋಗುತ್ತಿತ್ತು. ತದನಂತರ ಹಿಂದಿನ ಸರ್ಕಾರ ಸಮಿತಿಗಳನ್ನು ಮಾಡಿ ವಿಶೇಷವಾದಂಥ ಅಧ್ಯಯನವನ್ನು ಮಾಡಿ 28ನೇ ಜನವರಿ 2006ಕ್ಕೆ ಹೊಸ ಆದೇಶವನ್ನು ಹೊರಡಿಸಿದೆ. ಹೊಸ ಆದೇಶದ ಪ್ರಕಾರ ನಾನು ಅದನ್ನು ಆ್ಯಕ್ಷನ್ ಮಾಡಿದರೂ ಕೂಡ ಒಂದು ಹೆಕ್ಟೇರ್‌ಗೆ 150 ರೂಪಾಯಿಗಳಿಗಿಂತ ಜಾಸ್ತಿ ಛಾರ್ಜ್ ಮಾಡಬಾರದು ಎಂದು ಅದರಲ್ಲಿ ಇದೆ. ಸರ್ಕಾರದ ಆದೇಶ ಆ ರೀತಿ ಇದೆ. ಇದನ್ನು ನಾವು ಮಾಡಿದ್ದಲ್ಲ. ಇದರ ಗೈಡ್‌ಲೈನ್ಸ್ ಮೇಲೆಯೇ ನಾವು ಕೊಟ್ಟಿದ್ದೇವೆ. ಈ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಿದ್ದರೆ ಅವರು ತಮ್ಮಲ್ಲಿ ಬರಲಿ. ನಾನು ಬೇಕಾದರೆ ವಿರೋಧ ಪಕ್ಷದವರ ಜೊತೆ ಮಾತನಾಡಿ ಸೂಕ್ತವಾದಂಥ ವಿಚಾರವನ್ನು ತಿಳಿಸುತ್ತೇನೆ.

ಅಧ್ಯಕ್ಷರು : ಆ ರೀತಿ ಮಾಡಿ.

ಶ್ರೀ ಎಂ.ಟಿ.ಬಿ. ನಾಗರಾಜು : ಮಾನ್ಯ ಅಧ್ಯಕ್ಷರೆ, ಮೀನುಗಾರರ ಹೆಸರಿನಲ್ಲಿ ದಳ್ಳಾಳಿಗಳ ಕಾರುಬಾರು ಎಂದು ಪತ್ರಿಕೆಯಲ್ಲಿ ಬಂದಿದೆ. ಇವರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟ ಎಂದು ಪತ್ರಿಕೆಯಲ್ಲಿ ಬಂದಿದೆ. ಮಾನ್ಯ ಸಚಿವರು ಹೇಳುವುದು ಇದು ಸತ್ಯಕ್ಕೆ ದೂರವಾದ ಮಾತು. 2000–01ರಲ್ಲಿ 70 ಲಕ್ಷ ರೂಪಾಯಿ ಬಂದಿದೆ. 2005–06ಕ್ಕೆ 10 ಸಾವಿರಕ್ಕೆ ಬಿಡ್ ಮಾಡಿದ್ದಾರೆ ಎಂದರೆ ಇದರಲ್ಲಿ ಅಕ್ರಮವಾಗಿಲ್ಲವೇ? ಸಚಿವರೆ, ಸತ್ಯಕ್ಕೆ ದೂರವಾದ ಮಾತು ಎಂದು ಏಕೆ ಸುಳ್ಳನ್ನು ಹೇಳುತ್ತೀರಿ. ಪತ್ರಿಕೆಯಲ್ಲಿ ಬಂದಿದೆ, ಕೋರ್ಟ್ ಆದೇಶ ಇದೆ, ಸರ್ಕಾರದ ಆದೇಶ ಇದೆ, ಇದನ್ನೂ ಸುಳ್ಳು ಎಂದು ಹೇಗೆ ನೀವು ಹೇಳುತ್ತೀರಿ? ಇದಕ್ಕೆ ಸಮರ್ಪಕವಾಗಿ

ಉತ್ತರವನ್ನು ಕೊಡಬೇಕು. 2006ರಲ್ಲಿ ಆಗಿರತಕ್ಕಂಥ ಟೆಂಡರ್‌ನ್ನು ರದ್ದು ಮಾಡಬೇಕು. ಕೇವಲ 10 ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದಾರೆ. 15 ಲಕ್ಷ ರೂಪಾಯಿ ಪ್ರತಿ ವರ್ಷ ಕಟ್ಟಬೇಕಾಗಿರತಕ್ಕಂಥದ್ದಕ್ಕೆ ಇವರು ಕೇವಲ 10 ಸಾವಿರ ರೂಪಾಯಿಗಳಿಗೆ ಹೇಗೆ ಕೊಟ್ಟಿದ್ದಾರೆ? ಇದರಲ್ಲಿ ಅಕ್ರಮ ನಡೆದಿದೆ. ಯಾವ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಈ ಟೆಂಡರ್‌ನ್ನು ರದ್ದು ಮಾಡಬೇಕು.

ಅಧ್ಯಕ್ಷರು : ಆಯಿತು. ಮಾನ್ಯ ಸಚಿವರೇ, ಅವರಿಗೆ ಉತ್ತರ ಹೇಳಿ. ನೀವು ಸತ್ಯಕ್ಕೆ ದೂರವಾದುದು ಎಂದು ಹೇಳಿದಿರಿ. ಅವರು ನೀವು ಹೇಳುವುದು ಸುಳ್ಳು ಎನ್ನುತ್ತಿದ್ದಾರೆ. ಪತ್ರಿಕೆಗಳಲ್ಲೆಲ್ಲಾ ಬಂದಿದೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ನಾಗರಾಜಶೆಟ್ಟಿ : ನಾನು ಕಾನೂನಿನ ರೀತಿಯಲ್ಲಿ ಮಾತನಾಡುತ್ತಿದ್ದೇನೆ. ಅವರು ಪತ್ರಿಕೆಯಲ್ಲಿ ಬಂದ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಸರ್ಕಾರದ ಗೆಜೆಟ್‌ನಲ್ಲಿರುವಂತೆ ನಾನು ಮಾತನಾಡುತ್ತಿದ್ದೇನೆ. ಇದರಲ್ಲಿ ಅಧಿಕಾರಿಗಳಿರಬಹುದು ಅಥವಾ ಯಾರೇ ಇದರಲ್ಲಿ ತಪ್ಪು ಮಾಡಿದ್ದರೆ ಅವರ ಮೇಲೆ ನಾನು ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ.

ಅಧ್ಯಕ್ಷರು : ಪತ್ರಿಕಾ ವರದಿ ಮೇಲೆಯೇ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಅದನ್ನೇ ನಂಬುವುದಕ್ಕಾಗುವುದಿಲ್ಲ. ಆದರೆ ಇದು ಬಹಳ ಗಂಭೀರವಾದ ವಿಚಾರ. ಪತ್ರಿಕೆಗಳಲ್ಲೆಲ್ಲಾ ಬಂದಿದೆಯೆಂದರೆ, ಅದನ್ನು ನೀವು ಎಕ್ಸ್‌ಟ್ರಾ ಕೇರ್ ತೆಗೆದುಕೊಂಡು ಅದನ್ನು ಪರಿಶೀಲನೆ ಮಾಡಿಸಿ ದಾಖಲಾತಿಗಳನ್ನು ನೋಡಿ, ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ಟಿ.ಬಿ. ನಾಗರಾಜ್ : ಮಾನ್ಯ ಅಧ್ಯಕ್ಷರೆ, ಉಚ್ಚ ನ್ಯಾಯಾಲಯದ ಆದೇಶವಿದೆ.

ಅಧ್ಯಕ್ಷರು : ಆಯಿತು, ಅವರು ಉತ್ತರ ಕೊಟ್ಟಿದ್ದಾರೆ. ನೀವು ಹೋಗಿ ಅವರ ಹತ್ತಿರ ಮಾತನಾಡಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿ.

ಶ್ರೀ ಬಿ. ನಾಗರಾಜಶೆಟ್ಟಿ : ಆಯಿತು, ಮಾಡುತ್ತೇನೆ.

ಮುಜರಾಯಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಹಣವನ್ನು ಬಳಸಿಕೊಳ್ಳುವುದು

182 (708) ಶ್ರೀ ಸಿದ್ದುಸಾವದಿ (ಜಮಖಂಡಿ) : ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆಂದು ಮಂಜೂರಾದ ಹಣವನ್ನು ಖರ್ಚು ಮಾಡಲು ಇರುವ ಮಾರ್ಗಸೂಚಿಗಳೇನು;

ಆ) ಕೇವಲ ರೂ.25 ಸಾವಿರ ಹಣವನ್ನು ಪಡೆಯಲು ಈ ಮಾರ್ಗಸೂಚಿಗಳ ಅವಶ್ಯಕತೆ ಇದೆಯೇ;

ಇ) ಸದರಿ ಮಾರ್ಗಸೂಚಿಗಳಲ್ಲಿನ ಎಲ್ಲಾ ಮಾಹಿತಿಯನ್ನು ಪೂರೈಸಲು ಸಮಯದ ಜೊತೆಗೆ ಅಷ್ಟೇ ಹಣ ಖರ್ಚಾಗುವುದರಿಂದ ಬಹಳಷ್ಟು ಜನರು ಅದನ್ನು ಪಡೆಯದಿರುವುದು ಸರ್ಕಾರಕ್ಕೆ ತಿಳಿಸಿದೆಯೇ: